# ಕುವೆಂಪು ನೆನಪುಗಳಲ್ಲಿ ಸ್ವಾಮಿ ಸಿದ್ಧೇಶ್ವರಾನಂದರು

ತಾರಿಣಿ ಚಿದಾನಂದ

ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಸ್ಥಾಪಕರೂ ಮೊದಲ ಅಧ್ಯಕ್ಷರೂ ಆಗಿದ್ದ ಸ್ವಾಮಿ ಸಿದ್ಧೇಶ್ವರಾನಂದರು ರಾಷ್ಟ್ರಕವಿ ಕುವೆಂಪು ಅವರಿಗೆ ಅತ್ಯಂತ ಆಪ್ತರಾಗಿದ್ದವರು; ಅವರನ್ನು ಕುರಿತು ತಮ್ಮ ಆತ್ಮಚರಿತ್ರೆಯಲ್ಲಿ ಸುದೀರ್ಘವಾಗಿ ಬರೆದುಕೊಂಡಿದ್ದಾರೆ. ರಾಮಕೃಷ್ಣ ಭಾವಧಾರೆಯು ಕರ್ನಾಟಕದಲ್ಲಿ ಪಸರಿಸಲು ಮಹತ್ವದ ಪಾತ್ರ ವಹಿಸಿದ ಶ್ರೀ ಕುವೆಂಪು ಅವರ ಮೇಲೆ ಪೂಜ್ಯ ಸ್ವಾಮೀಜಿಯವರ ಪ್ರಭಾವ ಗಾಢವಾದದ್ದು – ಈ ರೀತಿಯಲ್ಲಿ ಭಾವಧಾರೆಗೆ ಪೂಜ್ಯ ಸ್ವಾಮೀಜಿ ಮಹತ್ತರ ಕಾಣಿಕೆ ನೀಡಿದರು. ರಾಷ್ಟ್ರಕವಿ ಕುವೆಂಪು ಅವರ ಸುಪುತ್ರಿ ಈ ಲೇಖನದಲ್ಲಿ ಸ್ವಾಮೀಜಿಯವರ ಜೀವನ, ಕೊಡುಗೆಗಳನ್ನು ಚಿತ್ರಿಸಿದ್ದಾರೆ.

ಶ್ರೀ ಸ್ವಾಮಿ ಸಿದ್ಧೇಶ್ವರಾನಂದರ ಮೇರುವ್ಯಕ್ತಿತ್ವದ ಕುರಿತು ಕುವೆಂಪು ಅವರಿಂದ ಕೇಳಿರುವುದೇ ಹೆಚ್ಚು. ಅವರನ್ನು ನೋಡುವ ಭಾಗ್ಯ ನನ್ನ ಪಾಲಿಗೆ ಒದಗಲಿಲ್ಲ. ನಾನು ಹುಟ್ಟುವ ಮೊದಲೇ ಅವರು ಮೈಸೂರಿನಿಂದ ಮದ್ರಾಸಿನ ಆಶ್ರಮಕ್ಕೆ ಹೋಗಿದ್ದರು. ಅನಂತರ ಎರಡು ವರ್ಷಗಳ ಬಳಿಕ ಫ್ರಾನ್ಸಿನ ಶ್ರೀರಾಮಕೃಷ್ಣ ಆಶ್ರಮಕ್ಕೆ ಮುಖ್ಯಸ್ಥರಾಗಿ ಹೋದರು. ಅದರಿಂದಾಗಿ ಅವರ ಬಗ್ಗೆ ನನ್ನ ತಂದೆಯವರಾದ ಕೆ.ವಿ. ಪುಟ್ಟಪ್ಪ (ಕುವೆಂಪು) ಅವರ ಬರವಣಿಗೆ ಹಾಗೂ ಅವರ ಮಾತಿನಿಂದಲೇ ನಮ್ಮ ಕುಟುಂಬಕ್ಕೆ ಸ್ವಾಮೀಜಿ ಬಹಳ ಹತ್ತಿರವಾದಂತೆ ಭಾಸವಾಗುತ್ತಿತ್ತು.

ಸ್ವಾಮಿ ಸಿದ್ಧೇಶ್ವರಾನಂದರು ಕೇರಳದ ತ್ರಿಚೂರ್ ಜಿಲ್ಲೆಯ ಪುಟ್ಟಹಳ್ಳಿಯಲ್ಲಿ ಜನಿಸಿದರು. ಅವರ ಪೂರ್ವಾಶ್ರಮದ ಹೆಸರು ಗೋಪಾಲ. ಅವರು ಕೊಚ್ಚಿನ್ ಮಹಾರಾಜರ ಮನೆತನಕ್ಕೆ ಸೇರಿದವರು. ಅವರ ಮಾಧ್ಯಮಿಕ ಪ್ರೌಢಶಾಲಾ ವಿದ್ಯಾಭ್ಯಾಸ ತ್ರಿಚೂರಿನಲ್ಲಿಯೇ ನಡೆಯಿತು. ಕಾಲೇಜು ವಿದ್ಯಾಭ್ಯಾಸಕ್ಕಾಗಿ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿಗೆ ಸೇರಿದರು. ಕಾಲೇಜಿನ ದಿನಗಳಲ್ಲಿ ಡಾ. ಸರ್ವೇಪಲ್ಲಿ ರಾಧಾಕೃಷ್ಣನ್ ಅವರು ಅದೇ ಕಾಲೇಜಿನಲ್ಲಿ ಓದುತ್ತಿದ್ದರು. ಅವರಿಬ್ಬರ ನಡುವೆ ಉತ್ತಮ ಮೈತ್ರಿ ಇತ್ತು. ಸ್ವಾಮೀಜಿಯವರಿಗೆ ಚಿಕ್ಕಂದಿನಲ್ಲಿಯೇ ಆಧ್ಯಾತ್ಮಿಕ ವಿಷಯಗಳ ಕುರಿತು ಒಲವು ಹಾಗೂ ಆಸಕ್ತಿ ಬಹಳವಾಗಿತ್ತು. ಅವರಿಗಿದ್ದ ಈ ಆಸಕ್ತಿಗಳೇ ಅವರ ಭವಿಷ್ಯವನ್ನು ರೂಪಿಸಿದುವು.

ಸ್ವಾಮೀಜಿ ಮದ್ರಾಸಿನಲ್ಲಿ ಓದುತ್ತಿದ್ದಾಗ ಮೈಲಾಪುರದ ಶ್ರೀರಾಮಕೃಷ್ಣ ಆಶ್ರಮದ ಸಂಪರ್ಕಕ್ಕೆ ಬಂದರು. ೧೯೧೭ರಲ್ಲಿ ಶ್ರೀರಾಮಕೃಷ್ಣ ಮಠದ ಅಧ್ಯಕ್ಷರೂ ಪರಮಹಂಸರ ನೇರ ಶಿಷ್ಯರೂ ಆದ ಸ್ವಾಮಿ ಬ್ರಹ್ಮಾನಂದರು ಮದ್ರಾಸಿನ ಆಶ್ರಮಕ್ಕೆ ಬಂದಿದ್ದರು. ಆ ಸಮಯದಲ್ಲಿ ಶ್ರೀರಾಮಕೃಷ್ಣರ ಜನ್ಮದಿನದಂದು ಗೋಪಾಲ ಮಹಾರಾಜರು ಬ್ರಹ್ಮಾನಂದರಿಂದ ಮಂತ್ರದೀಕ್ಷೆ ಪಡೆದರು. ೧೯೨೦ರ ಏಪ್ರಿಲ್‌ನಲ್ಲಿ ಮದ್ರಾಸು ಮಠವನ್ನು ಸೇರಿ ಸ್ವಾಮಿ ಬ್ರಹ್ಮಾನಂದರಿಂದ ಬ್ರಹ್ಮಚರ್ಯ ದೀಕ್ಷೆಯನ್ನು ಪಡೆದರು. ೧೯೨೪ರ ಫೆಬ್ರವರಿ ೨೭ರಂದು ರಾಮಕೃಷ್ಣ ಮಹಾಸಂಘದ ೨ನೇ ಅಧ್ಯಕ್ಷರಾದ ಸ್ವಾಮಿ ಶಿವಾನಂದರಿಂದ ಸಂನ್ಯಾಸ ದೀಕ್ಷೆಯನ್ನು ಪಡೆದರು. ೧೯೨೫ರಲ್ಲಿ ಬೇಲೂರು ಮಠದ ಅಧ್ಯಕ್ಷರಾದ ಸ್ವಾಮಿ ಶಿವಾನಂದರು ಮೈಸೂರಿನ ಜನತೆಯ ಆಕಾಂಕ್ಷೆಯಂತೆ ಆಶ್ರಮ ಸ್ಥಾಪಿಸಲು ಸಿದ್ಧೇಶ್ವರಾನಂದರನ್ನು ಮೈಸೂರಿಗೆ ಕಳಿಸಿದರು.



ಗೋಪಾಲ ಮಹಾರಾಜರು ತಮ್ಮ ಸಂನ್ಯಾಸೀ ಜೀವನಕ್ಕೆ ಹೋಗಲು ಅವರ ತಂದೆ ತಾಯಿಯರ ಒಪ್ಪಿಗೆಯನ್ನು ಕೇಳಿದಾಗ ಅವರಿಬ್ಬರೂ ಒಪ್ಪಿಗೆ ಕೊಡಲು ಸಿದ್ಧರಿರಲಿಲ್ಲ. ಅವರು ಮದುವೆಯಾಗಿ ಗೃಹಸ್ಥ ಜೀವನ ನಡೆಸಬೇಕೆಂಬುದು ಹೆತ್ತವರ ಆಸೆಯಾಗಿತ್ತು. ಮದುವೆಯಾಗಿ ಗೃಹಸ್ಥ ಜೀವನ ನಡೆಸಲು ತನಗೆ

ಆಸಕ್ತಿಯೇ ಇಲ್ಲವೆಂದು ಮಗ ತಿಳಿಸಿದಾಗ ಸಂನ್ಯಾಸಿಯಾಗಲು ತಂದೆಯವರ ಸಮ್ಮತಿ ದೊರಕಿದರೂ, ಅವರ ತಾಯಿಯವರು ಒಪ್ಪಿಗೆ ಕೊಡಲೇ ಇಲ್ಲ. ಗೋಪಾಲ ಮಹಾರಾಜರು ಎಲ್ಲಾ ರೀತಿಯಿಂದಲೂ ತಾಯಿಯವರ ಒಪ್ಪಿಗೆ ಪಡೆಯಲು ಪ್ರಯತ್ನಿಸಿದರೂ ಅವರ ಪ್ರಯತ್ನ ಸಫಲವಾಗಲಿಲ್ಲ. ತಾಯಿಯವರು ತುಂಬಾ ಬೇಸರದಿಂದ ತಮ್ಮ ಕೊಠಡಿಯ ಬಾಗಿಲನ್ನು ಹಾಕಿಕೊಂಡು ದುಃಖಿಸುತ್ತಾ ಕುಳಿತರು. 'ಬಾಗಿಲು ತೆಗೆಯಿರಿ' ಎಂದು ಹೊರಗಿನಿಂದ ಎಷ್ಟು ಕೇಳಿಕೊಂಡರೂ ಅವರು ಬಾಗಿಲು ತೆರೆಯಲಿಲ್ಲ, ಮತ್ತು ಊಟ ತಿಂಡಿ ಯಾವುದನ್ನೂ ತೆಗೆದುಕೊಳ್ಳಲಿಲ್ಲ. ಆಗ ಗೋಪಾಲ ಮಹಾರಾಜರಿಗೆ ತಾಯಿ ಹಿಂದೆ ಹೇಳಿದ್ದ ತನ್ನ ಜಾತಕದ ವಿಚಾರ ನೆನಪಾಯಿತು. 'ನಿನ್ನ ಜಾತಕ ಸುಮಾರು ೨೨ನೇ ವಯಸ್ಸಿನ ವರೆಗೆ ಮಾತ್ರ ಸಿಗುತ್ತದೆ ಎಂದು ಜ್ಯೋತಿಷಿಗಳು ತಿಳಿಸಿದ್ದಾರೆ' ಎಂದು ಕೆಲವು ವರ್ಷಗಳ ಹಿಂದೆ ಅವರ ತಾಯಿ ಹೇಳಿದ್ದರು. ಈ ವಿಚಾರವನ್ನು ತಾಯಿಯವರಿಗೆ ನೆನಪು ಮಾಡಿಕೊಡುತ್ತಾ ಗೋಪಾಲ ಮಹಾರಾಜರು 'ನಾನು ಸಂಸಾರಿಯಾದರೆ ಪ್ರಾಯಶಃ ೨೨ನೇ ವಯಸ್ಸಿನ ತನಕ ಬದುಕಬಹುದು, ಆದರೆ ಸಂನ್ಯಾಸಿಯಾದರೆ, ಅದು ಮರುಹುಟ್ಟು ಎಂದು ಪರಿಗಣಿತವಾಗಿ, ನಾನು ಹೆಚ್ಚು ವರ್ಷ ಬದುಕಿ, ಆಗಾಗ ನೀನು ಬಂದು ನನ್ನನ್ನು ನೋಡುವ ಸಾಧ್ಯತೆ ಇರಬಹುದು. ಇದರೆಡರಲ್ಲಿ ಯಾವುದನ್ನು ನೀನು ಆಯ್ಕೆ ಮಾಡುತ್ತೀಯೋ ಅದನ್ನು ನಾನು ಪಾಲಿಸುತ್ತೇನೆ' ಎಂದು ತಾಯಿಯವರಿಗೆ ಹೇಳಿ ಆಯ್ಕೆಯನ್ನು ಅವರಿಗೇ ಬಿಟ್ಟರು. ಬಹಳ ಅಳೆದು ಸುರಿದು ಯೋಚಿಸಿದ ಬಳಿಕ ತಾಯಿ ಮಗನಿಗೆ ಸಂನ್ಯಾಸಿಯಾಗಲು ಒಪ್ಪಿಗೆ ನೀಡಿದರು. ಹೀಗೆ ಅಪ್ಪ ಮತ್ತು ಅಮ್ಮ ಇಬ್ಬರ ಆಶೀರ್ವಾದ ಪಡೆದು ಸಂನ್ಯಾಸಿ ಜೀವನಕ್ಕೆ ಅವರು ಕಾಲಿಟ್ಟರು. ಮುಂದೆ ಅವರ ತಂದೆ ತಾಯಿ ಇಬ್ಬರೂ ಬೇಲೂರು ಮಠಕ್ಕೆ ಹೋಗಿ, ಸ್ವಾಮಿ ಶಿವಾನಂದರಿಂದ ಮಂತ್ರದೀಕ್ಷೆಯನ್ನು ಕೂಡಾ ಪಡೆದರು ಮತ್ತು ಇಡೀ ಕುಟುಂಬವೇ ಶ್ರೀರಾಮಕೃಷ್ಣರ ಕೃಪಾಕಟಾಕ್ಷದಿಂದ ಪುನೀತವಾಗಿ ಧನ್ಯವಾಯಿತು.



ಮುಂದೆ ಜೂನ್ ೧೧, ೧೯೨೫ರಂದು ಮೈಸೂರಿನಲ್ಲಿ ಸ್ವಾಮಿ ಸಿದ್ಧೇಶ್ವರಾನಂದರು ದಿವಾನ್ಸ್ ರಸ್ತೆಯಲ್ಲಿ ಒಂದು ಬಾಡಿಗೆ ಮನೆಯನ್ನು ತೆಗೆದುಕೊಂಡು ಅಲ್ಲಿ ಶ್ರೀರಾಮಕೃಷ್ಣ ಆಶ್ರಮವನ್ನು ಪ್ರಾರಂಭಿಸಿ, ಅದರ ಮೊದಲ ಅಧ್ಯಕ್ಷರಾದರು. ಅದಕ್ಕಿಂತ ಮುಂಚೆಯೇ ೧೯೨೦ರಲ್ಲಿ ಪುಟ್ಟಪ್ಪ (ಮುಂದೆ ಕುವೆಂಪು) ಅವರು ತಮ್ಮ ಕಗ್ಗಾಡಿನ ನಡುವಿದ್ದ ತಮ್ಮ ಮನೆ ಕುಪ್ಪಳಿಯಿಂದ ವಿದ್ಯಾಭ್ಯಾಸ ಮುಂದುವರಿಸಲು ಮೈಸೂರಿಗೆ ಬಂದು ವೆಸ್ಲಿಯನ್ ಮಿಷನ್ ಹೈಸ್ಕೂಲ್ ಸೇರಿದ್ದರು. ೧೯೨೨ರಲ್ಲಿ ಇಂಗ್ಲೀಷ್ ಕವನಸಂಕಲನ '**ಬಿಗಿನರ್ಸ್ ಮ್ಯೂಸ್**' ಮತ್ತು '**ಅಮಲನ ಕಥೆ**' ಬರೆದು ಮೈಸೂರಿನಲ್ಲಿ ಸಾಕಷ್ಟು ಹೆಸರು ಮಾಡಿದ್ದರು, ಮತ್ತು ಹೈಸ್ಕೂಲ್ ವಿದ್ಯಾಭ್ಯಾಸದ ಬಳಿಕ ಬಿ.ಎ. ಪದವಿಗಾಗಿ ಮಹಾರಾಜ ಕಾಲೇಜು ಸೇರಿದ್ದರು. ಪ್ರತಿದಿನ ಆಶ್ರಮದ ಮುಂದಿದ್ದ ದಾರಿಯಲ್ಲಿಯೇ ಕಾಲೇಜಿಗೆ ಹೋಗಿಬರುತ್ತಿದ್ದರೂ, ಅವರಿಗೆ ಆಶ್ರಮದ ಅಸ್ತಿತ್ವದ ಬಗ್ಗೆ ತಿಳಿದಿರಲಿಲ್ಲ. ಕುವೆಂಪು ಕಾಲೇಜಿನಲ್ಲಿ ಕೆಲವು ಮಂದಿ ಸಾಹಿತ್ಯಾಸಕ್ತ ಸ್ನೇಹಿತರನ್ನು ಸೇರಿಸಿ '**ಪದ್ಮಪತ್ರ ಸಂಘ**' (Lotus Leaf Union) ವನ್ನು ಸ್ಥಾಪಿಸಿ, ಅದರ ಮೂಲಕ ಸಾಹಿತ್ಯ, ಕಾವ್ಯವಾಚನ, ಅಧ್ಯಾತ್ಮ, ದೇಶಭಕ್ತಿ, ವಿವೇಕಾನಂದ, ಇತ್ಯಾದಿ ವಿಚಾರವಾಗಿ ಚರ್ಚೆ, ಭಾಷಣ, ಮೊದಲಾದ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಒಮ್ಮೆ ಈ ಸಂಘದಿಂದ ಒಂದು ಚರ್ಚಾಕೂಟ ಏರ್ಪಾಡಾಗಿತ್ತು. ನಾ. ಕಸ್ತೂರಿ ಅಧ್ಯಕ್ಷತೆ ವಹಿಸಲು ಒಪ್ಪಿದ್ದರು. ಆ ದಿನ ಸ್ವಾಮಿ ಸಿದ್ಧೇಶ್ವರಾನಂದರು ಕಸ್ತೂರಿಯವರೊಡನೆ ಸಭೆಗೆ ಆಗಮಿಸಿದ್ದರು, ಆಹ್ವಾನ ಇಲ್ಲದೇನೇ! ಕಸ್ತೂರಿಯವರು ಮಹಾರಾಜ ಕಾಲೇಜಿನಲ್ಲಿ ಕೆಲಸಮಾಡುತ್ತಿದ್ದರು. ಸಿದ್ಧೇಶ್ವರಾನಂದರು ಮತ್ತು ಕಸ್ತೂರಿಯವರು ಇಬ್ಬರೂ ಕೇರಳದವರಾಗಿದ್ದರು ಮತ್ತು ಬಹಳ ಆತ್ಮೀಯರಾಗಿದ್ದರು. ಸಿದ್ಧೇಶ್ವರಾನಂದರಿಗೆ ಕಾಲೇಜಿನ ಎಲ್ಲಾ ಅಧ್ಯಾಪಕರೂ ಬಹಳ ಪರಿಚಿತರಾಗಿದ್ದರು ಮತ್ತು ಅವರಿಗೆ ಮಹಾರಾಜರ ಸಂಪರ್ಕವೂ ಇತ್ತು. ಪ್ರಾಯಶಃ ಸ್ವಾಮೀಜಿಯವರಿಗೆ ಆ ಮೊದಲೇ ಪುಟ್ಟಪ್ಪ(ಮುಂದೆ ಕುವೆಂಪು)ನು ವಿವೇಕಾನಂದರ ಬಗ್ಗೆ ಮಾಡುತ್ತಿದ್ದ ಭಾಷಣ, ಕವಿತಾ ರಚನೆ ಇವೆಲ್ಲಾ ಆಶ್ರಮಕ್ಕೆ ಬರುತ್ತಿದ್ದ ಇತರ ಹುಡುಗರಿಂದ ಸ್ವಲ್ಪ ಸ್ವಲ್ಪ ತಿಳಿದಿತ್ತು ಎಂದು ತೋರುತ್ತದೆ. ಆ ಹುಡುಗ ಪುಟ್ಟಪ್ಪ ಯಾರು ಎಂದು ನೋಡಲು ಸ್ವಾಮೀಜಿ ಆ ಸಭೆಗೆ ಬಂದಿದ್ದರು ಎಂದು ತೋರುತ್ತದೆ. ಮೊದಲನೇ ವಾದಿಪಕ್ಷದ ಭಾಷಣಕಾರನಾಗಿ ಸ್ವಾಮಿ ವಿವೇಕಾನಂದರ ಭಾಷಣದ ಭಾಗಗಳನ್ನು ನಿರರ್ಗಳವಾಗಿ ಅಸ್ಖಲಿತ ವಾಣಿಯಿಂದ ಉದಾಹರಿಸುತ್ತಾ ಸಮರ್ಥವಾಗಿ ತನ್ನ ವಾದವನ್ನು ಮಂಡಿಸಿದ್ದರು ಪುಟ್ಟಪ್ಪ. ಅಂದಿನಿಂದಲೇ ಪುಟ್ಟಪ್ಪ ಸ್ವಾಮೀಜಿಯವರ ಪ್ರಭಾವಕ್ಕೆ ಒಳಗಾಗಿ ಪ್ರತಿದಿನ ಕಾಲೇಜಿಗೆ ಹೋಗುವಾಗಲೂ ಬರುವಾಗಲೂ ಆಶ್ರಮಕ್ಕೆ ಹೋಗಿ ದಿವ್ಯತ್ರಯರಿಗೆ

ಸಾಷ್ಟಾಂಗ ಪ್ರಣಾಮ ಮಾಡಿ, ಒಮ್ಮೊಮ್ಮೆ ಸಂಜೆಯ ಮಂಗಳಾರತಿಯಲ್ಲಿ, ಪ್ರಾರ್ಥನೆಯಲ್ಲಿ ಭಾಗಿಯಾಗಿ ಧನ್ಯನಾಗುವುದು ಒಂದು ಅವಶ್ಯ ರೂಢಿಯಾಗಿ ಹೋಯಿತು. **''ಕನ್ನಡಿಗರಲ್ಲದ ಮತ್ತು ಆಗತಾನೇ ಅಲ್ಪಸ್ವಲ್ಪ ಕನ್ನಡ ಅರ್ಥಮಾಡಿಕೊಳ್ಳುತ್ತಿದ್ದ ಮಲೆಯಾಳಿಗಳಾದ ಸ್ವಾಮೀಜಿ ಹಾಗೂ ಕಸ್ತೂರಿಯವರು ನನ್ನ ಕವನಗಳನ್ನು ಓದಿಸಿ, ಹಾಡಿಸಿ, ಮೆಚ್ಚಿ ತಲೆದೂಗಿ, ಬೆನ್ನುತಟ್ಟಿ, ಪ್ರೋತ್ಸಾಹಿಸುತ್ತಿದ್ದರು. ದೂರದ ಕಾಡುಹಳ್ಳಿಯಿಂದ ಬಂದು ವಿಕಾಸೋನ್ಮುಖನಾಗುತ್ತಿದ್ದ ನನ್ನ ಪ್ರತಿಭೆಗೆ ಅದು ಅಮೃತವಾರಿಯಾಗಿತ್ತು.''** – ಎಂದು ಕುವೆಂಪು ಅವರು '**ನೆನಪಿನ ದೋಣಿಯಲ್ಲಿ**' ಆತ್ಮಚರಿತ್ರೆಯಲ್ಲಿ ಬರೆಯುತ್ತಾರೆ.

ಸ್ವಾಮೀಜಿಯವರು ನಿಧಾನವಾಗಿ ಆಶ್ರಮದ ವಿಚಾರ, ಹಿರಿಯ ಸಾಧುಗಳ ವಿಚಾರ ಎಲ್ಲ ತಿಳಿಸುತ್ತ, ಶ್ರೀರಾಮಕೃಷ್ಣ ಮಿಷನ್ನಿನ '**ಪ್ರಬುದ್ಧ ಭಾರತ**', '**ವೇದಾಂತ ಕೇಸರಿ**' ಮುಂತಾದ ಮಾಸಪತ್ರಿಕೆಗಳನ್ನು ಕೊಟ್ಟು ಲೇಖನಗಳನ್ನು ಓದುವಂತೆ, ಮತ್ತು ಶ್ರೀರಾಮಕೃಷ್ಣ ಮಹಾಸಂಘದ ಕೇಂದ್ರಗಳಲ್ಲಿ ನಡೆಯುತ್ತಿದ್ದ ಕಾರ್ಯಕಲಾಪಗಳ ಪರಿಚಯ ಮಾಡಿಸುತ್ತಿದ್ದರು. ಮತ್ತು ಪುಟ್ಟಪ್ಪ ಅವರ ಭಾವಕೋಶ, ಕಾವ್ಯರಸಕೋಶಗಳನ್ನೆಲ್ಲ ವಿಶಾಲಗೊಳಿಸುತ್ತಿದ್ದರು. ಪುಟ್ಟಪ್ಪ ಅವರು ಪ್ರತಿದಿನ ಆಶ್ರಮಕ್ಕೆ ಹೋಗುತ್ತಿದ್ದ ಕಾರ್ಯ ನಿರಂತರ ನಡೆಯುತ್ತಿತ್ತು. ಪುಟ್ಟಪ್ಪ ಅವರು ರಜಾದಿನಗಳಲ್ಲಿ ಮಲೆನಾಡಿಗೆ ಹೋಗಿ ಬಂದಾಗಲೆಲ್ಲ ಮಲೇರಿಯಾ ರೋಗ ಅವರಲ್ಲಿ ಕಾಣಿಸಿಕೊಳ್ಳುತ್ತಿತ್ತು, ಮತ್ತು ಜ್ವರಗಡ್ಡೆ ಯಾವಾಗಲೂ ಇದ್ದೇ ಇರುತ್ತಿತ್ತು. ಒಮ್ಮೆ ಊರಿನಿಂದ ಬಂದ ನಂತರ ಮತ್ತೆ ಅವರಿಗೆ ಪ್ರಾರಂಭವಾದ ಮಲೇರಿಯಾ ಜ್ವರ ಹಿಂದಿನಂತೆ ಶಮನವಾಗಲಿಲ್ಲ. ಆ ದಿನ ನಾ. ಕಸ್ತೂರಿಯವರ ರೇವರ್ ಸ್ಕೌಟ್ಸ್ ದೀಕ್ಷೋತ್ಸವ ಸಮಾರಂಭವು ಶ್ರೀರಾಮಕೃಷ್ಣ ಆಶ್ರಮದಲ್ಲಿ ನಡೆಯಿತು. ಕುವೆಂಪು ಬರೆದ ಗೀತೆಯನ್ನು ಸಾಮೂಹಿಕವಾಗಿ ಹುಡುಗರು ಹಾಡಿದಾಗ ಸ್ವಾಮೀಜಿ ಕೇಳಿ ಸಂತೋಷಿಸಿ, ''ಎಲ್ಲಿ ಪುಟ್ಟಪ್ಪ ತುಂಬಾ ದಿನಗಳಿಂದ ಕಾಣುತ್ತಿಲ್ಲ?'' ಎಂದು ಸುತ್ತಲಿದ್ದವರಲ್ಲಿ ವಿಚಾರಿಸಿದರು. ಅಲ್ಲಿದ್ದ ಮಕ್ಕಳಲ್ಲಿ ಒಬ್ಬ ''ಅವರಿಗೆ ಮೈ ಸ್ವಸ್ಥವಿಲ್ಲ'' ಎಂದ. ಅದನ್ನು ಕೇಳಿ ಸ್ವಾಮೀಜಿ ಆತಂಕಗೊಂಡರು. ಒಬ್ಬ ಹುಡುಗನನ್ನು ಪುಟ್ಟಪ್ಪ ಇರುತ್ತಿದ್ದ ಸಂತೇಪೇಟೆ ರೂಮಿಗೆ ಹೋಗಿ ವಿಚಾರಿಸಿ ಬರಲು ಕಳಿಸಿದರು. ಪುಟ್ಟಪ್ಪ ಏಕಾಂಗಿಯಾಗಿ ತೀರ ಅಸ್ವಸ್ಥನಾಗಿದ್ದ ವಿಚಾರ ಆ ಹುಡುಗ ತಿಳಿಸಿದ. ಕಾರ್ಯಕ್ರಮ ಮುಗಿದೊಡನೆ ಸ್ವಾಮೀಜಿ ಪುಟ್ಟಪ್ಪನನ್ನು ವಿಚಾರಿಸಿಕೊಂಡು ಬರೋಣವೆಂದು ಸಂತೇಪೇಟೆಯ ಪುಟ್ಟಪ್ಪನ ರೂಮಿಗೆ ಹೊರಟರು. ಅವರೊಡನೆ ಸ್ಕೌಟ್ ದಳದ ಕೆಲವು ಹುಡುಗರನ್ನು ಕರೆದುಕೊಂಡು ನಾ. ಕಸ್ತೂರಿಯವರು, 'ಸ್ಕೌಟ್ ದಳದ ಮೊದಲ ಸೇವೆ ಪುಟ್ಟಪ್ಪನವರ ಸೇವೆ ಆಗಲಿ' ಎಂದು ಸ್ವಾಮೀಜಿಯವರ ಜತೆ ಹೊರಟರು.

ಸಂತೇಪೇಟೆಯ ರೂಮಿಗೆ ಬಂದಾಗ ಕತ್ತಲೆ ಕವಿಯುತ್ತಿತ್ತು. ಬಂದವರು ಉಪ್ಪರಿಗೆ ಹತ್ತಿ ರೂಮಿಗೆ ಬಂದರು. ಸಣ್ಣ ರೂಮಿನೊಳಗೆ ಒಂದು ಬದಿಯಲ್ಲಿ ಪುಸ್ತಕಗಳ ರಾಶಿಯ ಪಕ್ಕದಲ್ಲಿ ಹಾಸಿಗೆ ಹಿಡಿದು ನಿತ್ರಾಣವಾಗಿ ಮಲಗಿದ್ದ ಪುಟ್ಟಪ್ಪನನ್ನು ನೋಡಿ ಸ್ವಾಮೀಜಿ ತುಂಬಾ ಮರುಕಗೊಂಡರು. ಹತ್ತಿರ ಬಂದು ಕುಳಿತು ತಲೆ ಸವರಿ ಮಾತನಾಡಿಸಿದರು: ''ಏಕೆ ಪುಟ್ಟಪ್ಪಾ, ಆಶ್ರಮಕ್ಕಾದರೂ ಹೇಳಿ ಕಳಿಸಬಾರದೆ?'' ಎಂದು ಕೇಳಿದರು. ಎದ್ದು ಸ್ವಾಮೀಜಿಯವರಿಗೆ ನಮಸ್ಕರಿಸಲೂ ಆಗದೆ ಮಾತಾಡಲೂ ಕಷ್ಟಪಡುತ್ತಿದ್ದ ದುರ್ಬಲನಾಗಿದ್ದ ಪುಟ್ಟಪ್ಪನನ್ನು ಕೂಡಲೇ ಗಾಡಿ ತರಿಸಿ ಆಸ್ಪತ್ರೆಗೆ ಸೇರಿಸಲು ಸಿದ್ಧರಾದರು. ಆದರೆ ಪುಟ್ಟಪ್ಪ ಒಪ್ಪಬೇಕಲ್ಲ! ಸ್ಥಾವರ ಪ್ರಕೃತಿಯ ಪುಟ್ಟಪ್ಪ ಸ್ವಾಮೀಜಿಯ ಮಾತಿಗೆ ಒಪ್ಪಿಗೆ ಕೊಡಲಿಲ್ಲ. ಸ್ವಾಮೀಜಿ ನಾನಾ ರೀತಿಯಲ್ಲಿ ತಿಳಿವಳಿಕೆ ಹೇಳಿ, ''ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ವೈದ್ಯರು ನನಗೆ ಗೊತ್ತು, ನಿಮಗೆ ಮಹಡಿ ಮೇಲೆ ಸರಿಯಾದ ರೂಮು ಕೊಡಿಸುವೆ. ಅಲ್ಲೇ ಇದ್ದರೆ ರಕ್ತ ಪರೀಕ್ಷಿಸಲು ಮತ್ತು ಚಿಕಿತ್ಸೆ ಕೊಡಿಸಲು ವೈದ್ಯರಿಗೂ ಅನುಕೂಲ'' ಎಂದೆಲ್ಲಾ ಹೇಳಿ, ಕೊನೆಗೂ ಒಪ್ಪಿಸಿ, ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಿಸಿದರು. ಜ್ವರ ಬಿಡುವವರೆಗೂ ದಿನವೂ ಸಂಜೆ ಆಸ್ಪತ್ರೆಗೆ ಬಂದು ಪುಟ್ಟಪ್ಪನನ್ನು ವಿಚಾರಿಸಿ ಹಣ್ಣು ತಂದುಕೊಟ್ಟು, ಕೆಲವು ಸಲ ಅವರೇ ಸಿಪ್ಪೆ ಬಿಡಿಸಿ ತಿನ್ನಲು ಕೊಟ್ಟು, ಧೈರ್ಯ ತುಂಬಿ, ಮಾತಾಡಿಸಿ ನಗಿಸಿ ಹೋಗುತ್ತಿದ್ದರು. ಜ್ವರ ಬಿಟ್ಟ ಮೇಲೆ ಸ್ವಲ್ಪ ಶಕ್ತಿ ಬಂದು ಓಡಾಡುವಂತಾಗಲು ಕುವೆಂಪು ಅವರಿಗೆ ಆಸ್ಪತ್ರೆ ಬಿಟ್ಟು ರೂಮಿಗೆ ಹೋಗಬೇಕೆಂಬ ತವಕ ಹೆಚ್ಚಾಯಿತು. ಡಾಕ್ಟರ್‌ರವರು ಕ್ರಾನಿಕ್ ಮಲೇರಿಯಾ ಬಂದುದು, ಸರಿಯಾಗಿ ಚಿಕಿತ್ಸೆಯಿಂದ ಹೋಗಿಸಿಕೊಳ್ಳಬೇಕು, ೧೫ ಇಂಜೆಕ್ಷನ್ ತೆಗೆದುಕೊಳ್ಳಬೇಕು ಎಂದು ಅವರನ್ನು ಕಳಿಸಲು ಒಪ್ಪಲಿಲ್ಲ. 'ಆಸ್ಪತ್ರೆಯಿಂದ ಸಂತೆಪೇಟೆಯ ರೂಮಿಗೆ ಕಳಿಸಿ' ಎಂದು ಪ್ರತೀ ದಿನ ಸ್ವಾಮೀಜಿಯನ್ನು ಪುಟ್ಟಪ್ಪ ಪೀಡಿಸುತ್ತಿದ್ದರು. ಸ್ವಾಮೀಜಿ ಸಾಂತ್ವನದ ಮಾತು ಆಡಿ, ದಿವ್ಯತ್ರಯರ ಒಂದು ಸಣ್ಣ ಆಲ್ಬಮ್ ತಂದುಕೊಟ್ಟರು. ಅದನ್ನು ಯಾವಾಗಲೂ ಪುಟ್ಟಪ್ಪ ತಮ್ಮ ಬಳಿ ಇಟ್ಟುಕೊಳ್ಳುತ್ತಿದ್ದರು. ಸ್ವಾಮೀಜಿ ಸನಿಹದಲ್ಲಿ ಇರುವವರೆಗೆ ಪುಟ್ಟಪ್ಪನ ಮನಸ್ಸು ಶಾಂತವಾಗಿರುತ್ತಿತ್ತು. ಅವರು ಹೋದ ಮೇಲೆ ರಾತ್ರಿಯೆಲ್ಲಾ ದುಃಖಿಸುತ್ತಿದ್ದರು. ಇದೆಲ್ಲಾ ಗೊತ್ತಾಗಿ ಸ್ವಾಮೀಜಿಯವರು ಪುಟ್ಟಪ್ಪನನ್ನು ಆಶ್ರಮಕ್ಕೆ ಕರೆದೊಯ್ದು ಆರೋಗ್ಯವಂತರಾಗುವಂತೆ ನೋಡಿಕೊಳ್ಳಲು ತೀರ್ಮಾನಿಸಿದರು. ಈ ಕರಾರಿನ ಮೇಲೆ, ಡಾಕ್ಟರ್ ಅವರಿಗೆ ಹೇಳಿ, ''ರೋಗಿಯನ್ನು ಆಶ್ರಮದಲ್ಲಿ ಸರಿಯಾಗಿಯೇ ನೋಡಿಕೊಳ್ಳುವೆನು'' ಎಂದು ತಿಳಿಸಿ ಪುಟ್ಟಪ್ಪನನ್ನು ಒಪ್ಪಿಸಿ ಆಶ್ರಮಕ್ಕೆ ಕರೆದೊಯ್ದರು. ಅಂದಿನಿಂದ ೧೦ ವರ್ಷಗಳ ಕಾಲ ಪುಟ್ಟಪ್ಪ ಆಶ್ರಮವಾಸಿಯಾದರು.

ಪುಟ್ಟಪ್ಪನಿಗೆ ಪೂರ್ಣ ವಿಶ್ರಾಂತಿ ತೆಗೆದುಕೊಳ್ಳಲು ಹೇಳಿ, ಕವನ ಬರೆಯುವುದು, ಓದುವುದು, ದಿನಚರಿ ಬರೆಯುವುದು ಬೇಡ ಎಂದರು ಸ್ವಾಮೀಜಿ. ಕಸ್ತೂರಿಯವರ ಸ್ಕೌಟ್ ಹುಡುಗರ ಸಹಾಯವು ಸ್ವಾಮೀಜಿಯವರಿಗೆ ಒದಗುತ್ತಿತ್ತು. ಆದರೂ ಕೆಲವು ಬಾರಿ ಸೇವೆಗೆ ಯಾರೂ ಇಲ್ಲದಾಗ ಸ್ವಾಮೀಜಿಯೇ ಪುಟ್ಟಪ್ಪನ ಬಟ್ಟೆಗಳನ್ನೂ ಒಗೆದು, ಒಣಗಿಸಿ ಕೊಡುತ್ತಿದ್ದರು. **''ರಾಜಮನೆತನದಲ್ಲಿ ಹುಟ್ಟಿ ಬೆಳೆದಿದ್ದರೂ, ಪ್ರತಿಷ್ಠೆಯ ಗಂಧವೂ ಇಲ್ಲದ ನಿರಹಂಕಾರದಲ್ಲಿ ಅವರು ರಾಜಯೋಗಿಯಾಗಿರದೇ ಇದ್ದಿದ್ದರೆ ಇಂತೆಲ್ಲಾ ಸಾಧ್ಯವಾಗುತ್ತಿರಲಿಲ್ಲ''** ಎಂದು ಕುವೆಂಪು ಬರೆಯುತ್ತಾರೆ. ಕುವೆಂಪು

ರವರು ಮಲೇರಿಯಾದಿಂದ ಪೂರ್ಣ ಗುಣಮುಖರಾದ ಮೇಲೆ ತಪ್ಪದೆ ಸೊಳ್ಳೆಪರದೆ ಕಟ್ಟಿ ಮಲಗಲು ಸ್ವಾಮೀಜಿ ಕಲಿಸಿದರು. ಮುಂದೆ ಎಲ್ಲಿ ಹೋದರೂ ಅವರು ಸೊಳ್ಳೆಪರದೆ ತೆಗೆದುಕೊಂಡು ಹೋಗುತ್ತಿದ್ದರು. ಹೀಗೆ ಮಾಡಿ ಅವರು ಮಲೇರಿಯಾದಿಂದ ಪಾರಾದರು. ಹಾಗೆಯೇ ಅವರಿಗಿದ್ದ ಕಜ್ಜಿಯೂ ಸ್ವಾಮೀಜಿಯ ಔಷಧಿಯಿಂದ ಪೂರ್ಣ ಗುಣವಾಯಿತು.

ಕುವೆಂಪು ಬರೆಯುತ್ತಾರೆ: ''**ಆಗ ಆಶ್ರಮ ತುಂಬಾ ಬಡಸ್ಥಿತಿಯಲ್ಲಿತ್ತು. ಸ್ವಾಮೀಜಿಯೇ ಗುಡಿಸುವ ಕೆಲಸದಿಂದ ಹಿಡಿದು ಅಡಿಗೆಮನೆಯ ಕೆಲಸದವರೆಗೂ ಮಾಡುತ್ತಿದ್ದರು. ಇನ್ನು ದೇವರ ಮನೆ ಪೂಜಾದಿ ಕಾರ್ಯವೆಲ್ಲಾ ನಿರ್ವಹಿಸುತ್ತಿದ್ದರು. ಒಬ್ಬರು ಕಿರಿಯ ಸಂನ್ಯಾಸಿ ಕಮಲಾನಂದರು, ವೆಂಕಟೇಶಯ್ಯ, ಶಂಕರ್ ಮಹಾರಾಜ್ (ಅವರು ನಾನು ಆಶ್ರಮಕ್ಕೆ ಹೋಗುವುದಕ್ಕೆ ನಾಲ್ಕು ತಿಂಗಳು ಮೊದಲೇ ಬಂದಿದ್ದರು). ಕಸ್ತೂರಿಯವರ ವಿದ್ಯಾರ್ಥಿಗಳಲ್ಲಿ ಕೆಲವರು, ಮತ್ತು ವಿವೇಕಾನಂದ ಸ್ಕೌಟ್ ದಳದ ಕೆಲವರು ಬಂದು ಆಗಾಗ್ಗೆ ಸ್ವಾಮೀಜಿಗೆ ನೆರವಾಗುತ್ತಿದ್ದರು.**'' ಕುವೆಂಪು ಅವರು ಬದುಕಿರುವವರೆಗೆ ಶಂಕರ್ ಮಹಾರಾಜರವರು (ಮುಂದೆ ಜಗತ್ಪ್ರಸಿದ್ಧ ಸ್ವಾಮಿ ರಂಗನಾಥಾನಂದರು) ಮೈಸೂರಿಗೆ ಬಂದಾಗ ಕುವೆಂಪು ವಾಸವಾಗಿದ್ದ 'ಉದಯರವಿ' ಮನೆಗೆ ಬರುತ್ತಿದ್ದರು. ಆಗೆಲ್ಲಾ ಅವರು ನಗೆಯಾಡುತ್ತಿದ್ದರು, ''**ನೋಡಿ ಪುಟ್ಟಪ್ಪನವರೇ, ನಾನು ಆಶ್ರಮದಲ್ಲಿ ಇದ್ದುದರಿಂದ ನಿಮ್ಮನ್ನು ಆಶ್ರಮಕ್ಕೆ ಕರೆತರಲು ಸ್ವಾಮಿ ಸಿದ್ಧೇಶ್ವರಾನಂದರಿಗೆ ಸಾಧ್ಯವಾಯಿತು**'' ಎಂದು.

ಕುವೆಂಪು ೧೯೨೬ರಿಂದ ೧೯೩೬ರ ತನಕ ಶ್ರೀರಾಮಕೃಷ್ಣ ಆಶ್ರಮದಲ್ಲಿದ್ದರು ಮತ್ತು ಆ ಕಾಲದಲ್ಲಿ ಅವರ ಸಾಹಿತ್ಯಕೃಷಿ ಬಹಳ ಚೆನ್ನಾಗಿ ನಡೆಯಿತು. ಅವರು 'ಬೊಮ್ಮನ ಹಳ್ಳಿಯ ಕಿಂದರಿ ಜೋಗಿ', 'ಕೊಳಲು', 'ಪಾಂಚಜನ್ಯ'ವೇ ಸೇರಿದಂತೆ ಆರೇಳು ಕವನ ಸಂಗ್ರಹಗಳನ್ನು, 'ಯಮನ ಸೋಲು', 'ಜಲಗಾರ', 'ಮಹಾರಾತ್ರಿ'ಯೇ ಸೇರಿದಂತೆ ೯ ನಾಟಕಗಳನ್ನು, ೨ ಕಥಾಸಂಕಲನಗಳನ್ನು, ಮಹಾ ಕಾದಂಬರಿ 'ಕಾನೂರು ಹೆಗ್ಗಡಿತಿ'ಯನ್ನು, 'ಮಲೆನಾಡಿನ ಚಿತ್ರಗಳು' ಗದ್ಯಚಿತ್ರವನ್ನು, 'ಸ್ವಾಮಿ ವಿವೇಕಾನಂದ' ಮತ್ತು 'ಶ್ರೀರಾಮಕೃಷ್ಣ ಪರಮಹಂಸ' ಜೀವನ ಚರಿತ್ರೆಗಳನ್ನು ಪ್ರಕಟಿಸಿ ಕನ್ನಡ ಸಾಹಿತ್ಯಗಗನದಲ್ಲಿ ಹೊಳೆಯುವ ತಾರೆಯಾದರು.

೨೭-೫-೧೯೩೬ರಂದು ಕುವೆಂಪು ಮತ್ತಿತರರು ಸಿದ್ಧೇಶ್ವರಾನಂದರನ್ನು ಕುಪ್ಪಳಿಗೆ ಕರೆದುಕೊಂಡು ಹೋದರು. ಮರುದಿನ ಶ್ರೀರಾಮಕೃಷ್ಣ ಶತಮಾನೋತ್ಸವ ಆಚರಣೆಯಾದ್ದರಿಂದ ಮಧ್ಯಾಹ್ನದ ಮೇಲೆ ಕುಪ್ಪಳಿಯ ಉಪ್ಪರಿಗೆಯಲ್ಲಿ ದಿವ್ಯತ್ರಯರ ದೊಡ್ಡ ಬಣ್ಣದ ಭಾವಚಿತ್ರಗಳನ್ನು ಇರಿಸಿ ಅವುಗಳನ್ನು ಹಸುರು ಎಲೆಗಳಿಂದ ಅಲಂಕರಿಸಿ, ಪುಟ್ಟ ಅರಣ್ಯವನ್ನು ಸೃಷ್ಟಿಸಿದರು. ಮಹಿಳೆಯರು ಸುಂದರ ರಂಗವಲ್ಲಿಗಳನ್ನು ಹಾಕಿದರು. ಹೆಬ್ಬಾಗಿಲಿಗೆ ಬಾಳೆ ಕಂಬಗಳನ್ನು ನೆಟ್ಟು ಅಲಂಕಾರ ಮಾಡಿದರು. ಹಣತೆ ದೀಪದ ಸಾಲು ಇಡಲು ವ್ಯವಸ್ಥೆ ಮಾಡಿದರು. ಪೂಜಾಸಾಮಗ್ರಿಗಳನ್ನು ಶುಚಿಗೊಳಿಸಿದರು.

ಬಳಿಕ ಕುವೆಂಪು ಮತ್ತಿತರರು ಕವಿಶೈಲಕ್ಕೆ ಹೋಗುವ ಕಾರ್ಯಕ್ರಮ ಇರಿಸಿಕೊಂಡು ಸ್ವಾಮೀಜಿಯನ್ನೂ ಬರುವಂತೆ ಕೇಳಿಕೊಂಡರು. ಸ್ವಾಮೀಜಿ ಗುಡ್ಡ ಹತ್ತಲು ದಣಿವಾಗುವುದೆಂದೂ, ಹೇಗೂ ಹಿಂದಿನ ದಿನ ಅದನ್ನು ನೋಡಿದ್ದುದರಿಂದ ತಾನು ಬರುವುದಿಲ್ಲವೆಂದೂ ಹೇಳಿದರು. ಕುವೆಂಪು ಮತ್ತಿತರರು ಕವಿಶೈಲಕ್ಕೆ ಹೋದ ಮೇಲೆ ಹೆಣ್ಣುಮಕ್ಕಳೆಲ್ಲಾ ನಿಸ್ಸಂಕೋಚವಾಗಿ ಸ್ವಾಮೀಜಿಯ ಸುತ್ತ ನೆರೆದರು. ಸ್ವಾಮೀಜಿಯ ದಿವ್ಯ ವ್ಯಕ್ತಿತ್ವವು ಬಹುಬೇಗನೆ ಎಲ್ಲರನ್ನೂ ಆತ್ಮೀಯತೆಯಿಂದ ಆಕರ್ಷಿಸುತ್ತಿತ್ತು. ಹೆಣ್ಣುಮಕ್ಕಳೆಲ್ಲಾ ನಿಸ್ಸಂಕೋಚವಾಗಿ ಸ್ವಾಮೀಜಿಗೆ ಪ್ರಶ್ನೆಗಳನ್ನು ಕೇಳಿ, ಉತ್ತರ ಪಡೆದು, ಸ್ವಾಮೀಜಿಯ ಪ್ರಶ್ನೆಗಳಿಗೆಲ್ಲಾ ಮುಕ್ತ ಮನಸ್ಸಿನಿಂದ ಉತ್ತರಿಸಲಾರಂಭಿಸಿದರು. ಇದರ ಕುರಿತು ಕುವೆಂಪು ನೆನಪಿನ ದೋಣಿಯಲ್ಲಿ ಹೀಗೆ ಬರೆಯುತ್ತಾರೆ: ''**ಆ ಮಾತುಕತೆಗಳಲ್ಲಿ ಹೆಣ್ಣುಮಕ್ಕಳ ಕಡೆಯಿಂದ ಪಡೆಯಬಹುದಾದ ಕುಪ್ಪಳಿಯ ಮತ್ತು ದೇವಂಗಿಯ ಮನೆತನದ ಸಂಬಂಧದ ಸಾಂಸಾರಿಕ ವಿವರಗಳನ್ನೆಲ್ಲ ತಿಳಿದುಕೊಂಡರು. ನೇರವಾಗಿ ಆ ಮಾತನ್ನೇನೂ ಎತ್ತದೆ, ನನ್ನ ಮತ್ತು ಭಾವೀ ಸಹಧರ್ಮಿಣಿಯ ವಿಚಾರವಾಗಿಯೂ ತಿಳಿಯಬಹುದಾದ ವಿವರಗಳನ್ನೂ ಸಂಗ್ರಹಿಸಿಕೊಂಡರು. ಆ ಸಂಬಂಧದಿಂದ ನನ್ನ ಲೌಕಿಕ ಮತ್ತು ಆಧ್ಯಾತ್ಮಿಕ ಶ್ರೇಯಸ್ಸಿಗೆ ಪ್ರತಿಕೂಲವಾಗುವುದಿಲ್ಲ ಎಂಬುದನ್ನೂ ಗ್ರಹಿಸಿದರೆಂದು ತೋರುತ್ತದೆ. ನನ್ನ ಸ್ವಭಾವ ಮತ್ತು ಸ್ವಧರ್ಮಗಳಿಗೆ ಸಂನ್ಯಾಸವು ಪರಧರ್ಮವಾಗಿ ಭಯಾವಹವಾಗುತ್ತದೆ ಎಂಬುದನ್ನು ಸೂಕ್ಷ್ಮವಾಗಿ ಅರಿತಿದ್ದ ಅವರಿಗೆ ಮುಂದೆ ಈ ವಿಚಾರದಲ್ಲಿ ನನಗೆ ಏನು ಸಲಹೆ ಕೊಡಬೇಕು ಎಂಬುದನ್ನು ನಿಶ್ಚಯಿಸಿಕೊಂಡರೆಂದು ತೋರುತ್ತದೆ.**''

ಕುವೆಂಪು ಮುಂದುವರಿಸುತ್ತಾರೆ: ''**ಮರುದಿನ, ೨೮-೫-೧೯೩೬, ನಮ್ಮ ಮನೆ ಕುಪ್ಪಳಿಯ ಜೀವಮಾನದಲ್ಲಿ ಒಂದು ಚಿರಸ್ಮರಣೀಯವಾದ ಪವಿತ್ರದಿನವಾಯ್ತು, ಭಗವಾನ್ ಶ್ರೀರಾಮಕೃಷ್ಣ ಗುರುದೇವನ ಶತಮಾನೋತ್ಸವವನ್ನು ಆಚರಿಸಿ; ಮತ್ತು ಆ ಆಚರಣೆ ಶ್ರೀಮತ್ ಸ್ವಾಮಿ ಸಿದ್ಧೇಶ್ವರಾನಂದರ ನೇತೃತ್ವದಲ್ಲಿ ಮಾತ್ರವಲ್ಲದೆ ಆ ದಿನದ ಪೂಜಾದಿಗಳೆಲ್ಲ ಅವರ ದಿವ್ಯ ಹಸ್ತದಿಂದಲೇ ನಡೆದು! ಆ ದಿನದ ಪೂಜಾವಿಧಿಗಳನ್ನೆಲ್ಲ ಸ್ವಾಮೀಜಿಯೆ ಆಶ್ರಮದಲ್ಲಿ ನಡೆಸುವಂತೆ ಶಾಸ್ತ್ರೋಕ್ತ ಸಂಪ್ರದಾಯದ ಪ್ರಕಾರ ನಡೆಸಿದರು. ದೇವಂಗಿ, ಉಂಟೂರು, ಇಂಗ್ಲಾದಿ, ಅಲಿಗೆ ಮೊದಲಾದ ಕಡೆಗಳಿಂದ ನಂಟರು ಇಷ್ಟರು ಮಿತ್ರರು ನೆರೆದು ಆರಾಧನೆಯಲ್ಲಿ ಭಾಗವಹಿಸಿ ಧನ್ಯರಾದರು. ಸಂಜೆ ಕವಿಶೈಲದತ್ತ ಹೋಗಿ ಸುತ್ತಣ ಕಾಡುಗಳಲ್ಲಿ ತಿರುಗಾಡಿ ಕತ್ತಲಾದ ಮೇಲೆ ಮನೆಗೆ ಬಂದೆವು. ಅಷ್ಟರಲ್ಲಿ ಕಾರ್ತಿಕ ದೀಪೋತ್ಸವಕ್ಕೆ ಅಣಿಯಾಗಿತ್ತು. ಅದರ ದಿವ್ಯತೆ ಮತ್ತು ಭವ್ಯತೆಗಳು ಇಂದಿನ ನೆನಪಿಗೆ ತಗಲುತ್ತಿರುವಂತೆ ಅಂದಿನ ನೈಜಕ್ಕೆ ವೇದ್ಯವಾಗಿರಲಿಲ್ಲ ಎಂದು ತೋರುತ್ತದೆ? ಮಹಿಮೆ ಮನಸ್ಸಿಗೆ ಬರಬೇಕಾದರೆ ನಾವು ಘಟನೆಯಿಂದ ಸ್ವಲ್ಪ ದೂರಕ್ಕೆ ಸರಿಯಬೇಕಾಗುತ್ತದೆ, ಕಾಲದಲ್ಲಿಯೂ ಮತ್ತು ದೇಶದಲ್ಲಿಯೂ!**''

ಸ್ವಾಮಿ ಸಿದ್ಧೇಶ್ವರಾನಂದರ ಭಾಷೆಗಳನ್ನು ಕಲಿಯುವ ಅದ್ಭುತ ಸಾಮರ್ಥ್ಯದ ಕುರಿತು ಕುವೆಂಪು ಬರೆಯುತ್ತಾರೆ: ''**ಅವರಿಗೆ ಕನ್ನಡ**

**ಓದಿ ಬರೆಯಲು ಬರುತ್ತಿರಲಿಲ್ಲವಾದರೂ ಮೈಸೂರು ಆಶ್ರಮಕ್ಕೆ ಬಂದ ಕೆಲವೇ ದಿನಗಳಲ್ಲಿ ಕನ್ನಡದಲ್ಲಿ ಸಾಮಾನ್ಯರೊಡನೆ ಚೆನ್ನಾಗಿ ಮಾತನಾಡುವಷ್ಟರ ಮಟ್ಟಿಗೆ ಕನ್ನಡ ಕಲಿತಿದ್ದರು. ಅಷ್ಟೇ ಅಲ್ಲ, ತಕ್ಕಮಟ್ಟಿಗೆ ಕನ್ನಡದಲ್ಲಿಯೇ ಸಣ್ಣಸಣ್ಣ ಗುಂಪುಗಳಿಗೆ ವೇದಾಂತದ ವಿಚಾರವಾಗಿ ಪ್ರವಚನ ಕೊಡುವಷ್ಟು ಮುಂದುವರಿದಿದ್ದರು. ಅವರ ಆ 'ಭಾಷೆಯನ್ನು ಕಲಿಯುವ ಶಕ್ತಿ'ಯ ಅದ್ಭುತ ಪ್ರದರ್ಶನವನ್ನು ಮುಂದೆ ಅವರು ಫ್ರಾನ್ಸ್ ದೇಶಕ್ಕೆ ಪ್ಯಾರಿಸ್ಸಿನ ಶ್ರೀರಾಮಕೃಷ್ಣಾಶ್ರಮದ ಅಧ್ಯಕ್ಷರಾಗಿ ಹೋದ ಮೇಲೆ ನಾವು ಇನ್ನೂ ವಿಸ್ಮಯಗೊಳ್ಳುವ ರೀತಿಯಲ್ಲಿ ಕಾಣುತ್ತೇವೆ. ಅಲ್ಲಿಗೆ ಅವರು ಹೋದ ಸ್ವಲ್ಪ ಕಾಲದಲ್ಲಿಯೆ ಫ್ರೆಂಚ್ ಭಾಷೆಯನ್ನು ಮಾತನಾಡಲು ಕಲಿತದ್ದಲ್ಲದೆ ಓದಿ ಬರೆಯುವುದನ್ನೂ ಎಷ್ಟು ಸಮರ್ಥವಾಗಿ ಅಭ್ಯಾಸ ಮಾಡಿದರು ಎಂದರೆ, ಜಗತ್ಪ್ರಸಿದ್ಧವಾಗಿರುವ ಫ್ರೆಂಚ್ ವಿಶ್ವವಿದ್ಯಾನಿಲಯಗಳಲ್ಲಿ ಮಹಾ ಮೇಧಾವಿಗಳಾದ ಪ್ರಾಧ್ಯಾಪಕರೂ ದಂಗು ಬಡಿಯುವಂತೆ ಫ್ರೆಂಚ್ ಭಾಷೆಯಲ್ಲಿಯೇ ಗಂಟೆಗಟ್ಟಲೆ ನಿರರ್ಗಳವಾಗಿ ವಿದ್ವತ್ಪೂರ್ಣ ವಿಶೇಷ ಉಪನ್ಯಾಸಗಳನ್ನು ಕೊಟ್ಟು, ಅವು ಆ ವಿಶ್ವವಿದ್ಯಾನಿಲಯಗಳಿಂದ ಹೊತ್ತಗೆಗಳಾಗಿ ಹೊರಬಂದುದನ್ನೂ ನಾವು ನೋಡುತ್ತೇವೆ!''**

೯ ವರ್ಷಗಳ ಕಾಲ ಕುವೆಂಪು ಅವರು ಸ್ವಾಮಿ ಸಿದ್ಧೇಶ್ವರಾನಂದರ ಶ್ರೀರಕ್ಷೆಯಲ್ಲಿ ತಮ್ಮ ಜೀವನೋದ್ಧಾರದ ಪಥದಲ್ಲಿ ಸಾಗಿದರು. ಕುವೆಂಪು ಅವರ ಸಾಹಿತ್ಯಪ್ರತಿಭೆ ಹೊರಬರಲು ಸಾಕಷ್ಟು ಪ್ರೋತ್ಸಾಹ ಸ್ವಾಮೀಜಿಯವರಿಂದ ದೊರಕಿತ್ತು. ವಿರಾಮದ ಸಮಯದಲ್ಲಿ ಸ್ವಾಮೀಜಿಯವರೊಡನೆ ಮಾತನಾಡುವುದು ಕೂಡಾ ನಮ್ಮ ಜ್ಞಾನ ಹೆಚ್ಚಿಸಿಕೊಂಡಂತೆ ಎನ್ನುತ್ತಿದ್ದರು ಕುವೆಂಪು. ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದಾಗ ಕುವೆಂಪು ಅವರನ್ನು ನೋಡಿಕೊಂಡು ರಕ್ಷಿಸುವ ಹೊಣೆ ಹೊತ್ತವರು ಸ್ವಾಮೀಜಿ. ಚಿಕ್ಕ ವಯಸ್ಸಿನಲ್ಲಿ ತಂದೆ, ಕಾಲೇಜಿನಲ್ಲಿ ಓದುತ್ತಿರುವಾಗ ತಾಯಿ, ಆ ಬಳಿಕ ಇಬ್ಬರು ತಂಗಿಯರು, ಚಿಕ್ಕಪ್ಪ, ಪ್ರೀತಿಯ ತಮ್ಮ ತಿಮ್ಮು – ಮೊದಲಾದ ತೀರ ಹತ್ತಿರದ ಸಂಬಂಧಿಗಳು ತೀರಿಕೊಂಡಾಗ ಅನಾಥಪ್ರಜ್ಞೆಯಿಂದ ನವೆಯುತ್ತಿದ್ದ ಕುವೆಂಪು ಅವರಿಗೆ ಎಲ್ಲವೂ ಸಿದ್ಧೇಶ್ವರಾನಂದರೇ ಆಗಿದ್ದರು. ಕುವೆಂಪು ಕೆಲಸಕ್ಕೆ ಸೇರಲು, ಮನೆ ಕಟ್ಟಲು, ಗೃಹಸ್ಥರಾಗಲು, ಹೀಗೆ ಎಲ್ಲದರಲ್ಲಿಯೂ ಸ್ವಾಮೀಜಿಯವರ ಅಮೂಲ್ಯ ಸಲಹೆ ಮತ್ತು ಪ್ರಭಾವಗಳು ಎದ್ದು ಕಾಣುತ್ತವೆ. ಕುವೆಂಪು ಶ್ರೀರಾಮಕೃಷ್ಣ ಆಶ್ರಮವನ್ನು ಬಿಟ್ಟು ಗೃಹಸ್ಥಾಶ್ರಮವನ್ನು ಸ್ವೀಕರಿಸಿದ ಬಳಿಕ, ಬೆಂಗಳೂರಿನ ಆಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ಸಿದ್ಧೇಶ್ವರಾನಂದರು ಫ್ರಾನ್ಸ್ ದೇಶದ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿ ಎರಡನೇ ಮಹಾಯುದ್ಧವು ಪ್ರಾರಂಭವಾಗುವ ಸಮಯದಲ್ಲಿ ಅಲ್ಲಿಗೆ ಹೋದರು. ಅನಂತರ ಸ್ವಾಮಿ ಸಿದ್ಧೇಶ್ವರಾನಂದರ ಪತ್ರಗಳು ಕುವೆಂಪು ಅವರಿಗೆ ಫ್ರಾನ್ಸಿನಿಂದ ಬರುತ್ತಿದ್ದವು. ೧೯೪೭ರಲ್ಲಿ ಸ್ವಾಮೀಜಿಯ ತಾಯಿಯವರ ಅನಾರೋಗ್ಯದ ಕಾರಣ, ಅವರನ್ನು ಕಾಣಲೆಂದು ಸ್ವಾಮೀಜಿ ಭಾರತಕ್ಕೆ ಬಂದರು. ಆ ಸಂದರ್ಭದಲ್ಲಿ ಮೈಸೂರಿಗೂ ಅವರು ಭೇಟಿಕೊಟ್ಟರು. ಕುವೆಂಪು ಅವರ ಆಹ್ವಾನದ ಮೇರೆಗೆ ಸ್ವಾಮೀಜಿ 'ಉದಯರವಿ' ಮನೆಗೂ ಬಂದಿದ್ದರು. ಬೆಳಗ್ಗೆ ಬಂದು, 'ಉದಯರವಿ'ಯ ದೇವರಮನೆಯಲ್ಲಿ ಪೂಜೆ ಮಾಡಿ ಪ್ರಾರ್ಥನೆಗಳನ್ನು ಹೇಳಿ, ತುಂಬಾ ಹೊತ್ತು ಧ್ಯಾನಸ್ಥರಾಗಿ ಕುಳಿತಿದ್ದರೆಂದು ಕುವೆಂಪು ಹೇಳುತ್ತಿದ್ದರು. ಬಳಿಕ ಸ್ವಾಮೀಜಿ ಪ್ರಸಾದವನ್ನು ಸೇವಿಸಿ ಎಲ್ಲರನ್ನೂ ಆಶೀರ್ವದಿಸಿ ನಿರ್ಗಮಿಸಿದರು. ಮುಂದಿನ ದಿನಗಳಲ್ಲಿ ಸ್ವಾಮೀಜಿ ಮತ್ತು ಕುವೆಂಪು ಪತ್ರಗಳ ಮೂಲಕವೇ ಮಾತಾಡುತ್ತಿದ್ದರು. ಕುವೆಂಪು ಬರೆದ ಈ ಸಣ್ಣ ಕವನದಲ್ಲಿ ಸ್ವಾಮಿ ಸಿದ್ಧೇಶ್ವರಾನಂದರ ಪೂರ್ಣ ವ್ಯಕ್ತಿತ್ವವನ್ನು ಕಾಣಬಹುದು:

**ಮಾನ್ಯರಲ್ಲಿ ಪರಮಮಾನ್ಯ ;**
**ಸಾಮಾನ್ಯರಲ್ಲಿ ಸಾಮಾನ್ಯ;**
**ನಿಮ್ಮ ಕೃಪೆಯೊಳಾದೆ ಧನ್ಯ ;**
**ನಿಮ್ಮ**
**ನೆನೆವುದೆನಗೆ ಪೂಜನ.**

✽

## ಎರಡು ಒಂದಾಗುವುದು

**ಯಾ**ರು ಬ್ರಹ್ಮನೋ ಆತನೇ ಆದ್ಯಾಶಕ್ತಿ. ಒಬ್ಬ ರಾಜ ಒಮ್ಮೆ ಒಬ್ಬ ಯೋಗಿಗೆ ಹೇಳಿದ, ತನಗೆ ಒಂದೇ ಒಂದು ಪದದಲ್ಲಿ ಬ್ರಹ್ಮಜ್ಞಾನ ದೊರಕಿಸಿಕೊಡಬೇಕು ಎಂಬುದಾಗಿ. ಯೋಗಿ ಹೇಳಿದ: 'ಆಗಲಿ, ಒಂದು ಪದದಿಂದಲೇ ನಿನಗೆ ಬ್ರಹ್ಮಜ್ಞಾನ ದೊರಕಿಸಿ ಕೊಡುತ್ತೇನೆ.' ಸ್ವಲ್ಪ ಹೊತ್ತಾದ ನಂತರ ಒಬ್ಬ ಮಂತ್ರವಾದಿ ದೊರೆಯ ಹತ್ತಿರಕ್ಕೆ ಇದ್ದಕ್ಕಿದ್ದ ಹಾಗೆ ಬರುತ್ತಾನೆ. ಆತ ಎರಡು ಬೆರಳುಗಳನ್ನು ಬಹಳವಾಗಿ ತಿರುಗಿಸುತ್ತಿರುವುದು ಮತ್ತು ಹೇಳುತ್ತಿರುವುದು: 'ರಾಜ, ಇಲ್ಲಿ ನೋಡು! ಇಲ್ಲಿ ನೋಡು!' ದೊರೆ ಆಶ್ಚರ್ಯಚಕಿತನಾಗಿ ನೋಡಲಾರಂಭಿಸುತ್ತಾನೆ. ಹಾಗೆ ನೋಡುತ್ತಿದ್ದ ಹಾಗೆ ಕೆಲವು ನಿಮಿಷಗಳ ನಂತರ ಎರಡು ಬೆರಳೂ ಕೂಡಿ ಒಂದೇ ಆಗಿಬಿಡುತ್ತದೆ. ಬಳಿಕ ಮಂತ್ರವಾದಿ ಆ ಒಂದೇ ಬೆರಳನ್ನು ಸುತ್ತುತ್ತ ಹೇಳುತ್ತಾನೆ: 'ರಾಜ, ಇಲ್ಲಿ ನೋಡು! ಇಲ್ಲಿ ನೋಡು! ಇದರ ಇಂಗಿತಾರ್ಥ, ಮೊದಮೊದಲು ಬ್ರಹ್ಮ ಮತ್ತು ಆದ್ಯಾಶಕ್ತಿ ಎರಡು ವಸ್ತು ಎಂಬ ಬೋಧೆಯಾಗುತ್ತದೆ. ಆದರೆ ಬ್ರಹ್ಮಜ್ಞಾನ ದೊರೆತನಂತರ ಅವು ಎರಡು ಎಂಬ ಬೋಧೆಯಾಗದು. ಆಗ ಅಭೇದ ಎಂಬ ಬೋಧೆ – ಒಂದೇ ಎಂಬ ಬೋಧೆ. ಏಕಮೇವಾದ್ವಿತೀಯಮ್ – ಅದ್ವೈತ ಎಂಬ ಬೋಧೆ.'

*'ಶ್ರೀರಾಮಕೃಷ್ಣ ವಚನವೇದ' ದಿಂದ*